**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.2550/2025**

ಸಿ.ಡಬ್ಲ್ಯು 07

ಪಿ.ಡಬ್ಲ್ಯು 07

| | |
|---|---|
| ಸಾಕ್ಷಿದಾರರ ಹೆಸರು | - **ಶಂಕರ ನಾರಾಯಣ ಗೌಡಾ** |
| ತಂದೆಯ ಹೆಸರು | - ನಾರಾಯಣ ಗೌಡಾ |
| ವಯಸ್ಸು | - 36 ವರ್ಷ |
| ಉದ್ಯೋಗ | - ಚಾಲಕ |
| ವಾಸ್ತವ್ಯ | - ಗೋಕರ್ಣ |

(ಇಂದು ದಿನಾಂಕಃ **19-01-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಮೃತ ಲಲಿತಾ ಇವರ ಪರಿಚಯ ಇರುವುದಿಲ್ಲ. ಅವರು ಹೇಗೆ ಮೃತಪಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಚಾಸಾ 1 ರವರ ಪರಿಚಯ ಇರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾವು ಹೇಗೆ ಸಂಭವಿಸಿತು ಎಂದು ನನಗೆ ಮಾಹಿತಿ ಇರುವುದಿಲ್ಲ.

ನಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

**ದಿಃ 29/06/2025 ರಂದು** ನಾನು ಗಂಗಾವಳಿಯ ಗಂಗಾಮಾತಾ ದೇವಸ್ಥಾನದಲ್ಲಿ ಮದುವೆಯನ್ನು ಮುಗಿಸಿಕೊಂಡು ಬರುತ್ತಿದ್ದೇನು ಎಂದರೆ ಸರಿಯಲ್ಲ. ಮಧ್ಯಾಹ್ನ ಸುಮಾರು 01-30 ಗಂಟೆಗೆ ಗಂಗಾವಳಿ ಗೋಕರ್ಣ ತದಡಿ ರಸ್ತೆಯ ಮೂಲಕ ಬರುತ್ತಿದ್ದಾಗ, ಹನೇಹಳ್ಳಿ ಘಟಗಿ ರಸ್ತೆಯ ಮೇಲೆ ತಲುಪಿದಾಗ ನನ್ನ ಮುಂದಿನಿಂದ 100 ಅಡಿಯಲ್ಲಿ ಒಬ್ಬ ಮೋಟಾರ ಸೈಕಲ ಸವಾರನು ಹಿಂಬದಿಗೆ ಬಿಳಿ ಹಾಗೂ ನೀಲ ಬಣ್ಣದಿಂದ ಕೂಡಿದ ಚೂಡಿದಾರ ಧರಿಸಿದ ಒಂದು ಹೆಂಗಸನ್ನು ಕೂರಿಸಿಕೊಂಡು ತನ್ನ ವಾಹನವನ್ನು ಅತೀ ವೇಗವಾಗಿ ಚಲಾಯಿಸುತ್ತಿದ್ದನ್ನು ಎಂದರ ಸರಿಯಲ್ಲ, ನಂತರ ಆತನು ತನ್ನ ಚಾಲನೆಯ ನೀಯಂತ್ರಣವನ್ನು ಕಳೆದುಕೊಂಡು ರಸ್ತೆಯ ಬಲಬದಿಗೆ ಮೋಟಾರ ಸೈಕಲನ್ನು ಅಪಘಾತಪಡಿಸಿದನು ಎಂದರೆ ಸರಿಯಲ್ಲ. ಇದರಿಂದಾಗಿ ಅವರಿಬ್ಬರು ರಸ್ತೆಗೆ ಬಿದ್ದರು ಎಂದರೆ ಸರಿಯಲ್ಲ. ನಂತರ ನಾನು ಹಾಗೂ ಚಾಸಾ 1 ರವರು ಅವರನ್ನು ಉಪಚರಿಸಿರುತ್ತೇವೆ ಎಂದರೆ ಸರಿಯಲ್ಲ, ನಂತರ ಮೃತ ಲಲಿತಾ ಇವರನ್ನು ನನ್ನ ರಿಕ್ಷಾದ ಮೇಲಾಗಿ ಗೋಕರ್ಣ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿ ವೈದ್ಯಾಧಿಕಾರಿಯು ಆಕೆಯ ಮೃತಪಟಟಿರುವ ಕುರಿತಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ,

**C.W.** 07 **P.W.** 07

ವಾಹನ ಚಾಲಕನ ಹೆಸರು ನಾಗಪ್ಪಾ ಸುಕ್ರು ಗೌಡಾ ಎಂದು ತಿಳಿಸಿದನು ಎಂದರೆ ಸರಿಯಲ್ಲ. ಹಿಂಬದಿ ಸವಾರಳ ಹೆಸರು ಲಲಿತಾ ಗೌಡಾ ಎಂದು ತಿಳಿಸಿದನು ಎಂದರೆ ಸರಿಯಲ್ಲ.

1ನೇ ಆರೋಪಿತನ ಮೊಟಾರ ಸೈಕಲ್ ನಂಬರ ಕೆಎ 47 ಎಲ್ 6055 ನಲ್ಲಿ ಹಿಂಬದಿ ಸವಾರಳನ್ನು ಕುಳ್ಳಿರಿಸಿಕೊಂಡು ಗಂಗೆಕೊಳ್ಳ ಕ್ರಾಸ್ ದಿಂ ಗೋಕರ್ಣ ಕಡೆಗೆ ಬರುತ್ತಿದ್ದಾಗ ರಸ್ತೆಯ ಬಲಬದಿಯಲ್ಲಿ ಮೋಟಾರ ಸೈಕಲನ ನೀಯಂತ್ರಣ ತಪ್ಪಿ ಮೋಟಾರ ಸೈಕಲ ಸಮೇತ ಬಿದ್ದಿದ್ದರು ಎಂದರೆ ಸರಿಯಲ್ಲ. ಈ ಕುರಿತಾಗಿ ದಿನಾಂಕಃ 30-06-2025 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ 12 ಎಂದು ಗುರುತಿಸಲಾಯಿತು.

ನಿಪಿ12 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದ್ದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ12 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಪಿ.ಎಚ್.ಕೆ. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ